ಸಮುದ್ರದಲ್ಲಿ ನಡೆದ ಪೋಲೀಸು ಗೋಲೀಬಾರಿನ ಬಗ್ಗೆ ತನಿಖೆ ನಡೆಸುವುದಕ್ಕೆ ನೇಮಿಸಿದ ಮಹಮ್ಮದ್ ಅಸೀಬ್ ತನಿಖಾ ಆಯೋಗದ ವರದಿ ಮತ್ತು ಕೈಕೊಂಡ ಕ್ರಮದ ಬಗ್ಗೆ ವಿವರಣಾ ಪತ್ರಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ವರದಿಯನ್ನು ಮಂಡಿಸಲಾಯಿತು.

4. Presentation of Petition

ಡಾ. ವಿ.ಎಸ್. ಆಚಾರ್ಯ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಎಂ.ಪಿ. ಕರ್ಕಿ ಅವರ ಪರವಾಗಿ ಈ ಮನವಿಯನ್ನು ಸಭೆಯ ಮುಂದಿಡುತ್ತೇನೆ.

ಗಮನ ಸೆಳೆಯುವ ಸೂಚನೆ

ಅಧ್ಯಕ್ಷರು.— ಡಾ. ಸಂಗಮೇಶ್ವರ್ ಸರದಾರ್ (ಗೈರು ಹಾಜರಿ)

5. ನಿಯಮ 334ರ ಮೇರೆಗೆ

(i) ವಿಷಯ : ಬೀದರ್‌ನಲ್ಲಿ ಖಂಡಸಾರಿ ಕಾರ್ಖಾನೆ ಕಾರ್ಮಿಕರಿಗೆ ಕೊಡತಕ್ಕ ಸಂಬಳದ ಬಗ್ಗೆ.

ಶ್ರೀ ಎಸ್. ಸೂರ್ಯನಾರಾಯಣರಾವ್.— ಮಾನ್ಯ ಅಧ್ಯಕ್ಷರೇ, ಬೀದರ್ ಜಿಲ್ಲೆಯಲ್ಲಿ 11 ಖಂಡ ಸಾರಿ ಸಕ್ಕರೆ ಕಾರ್ಖಾನೆಗಳಿದ್ದು, ಸುಮಾರು 5,000 ಜನ ಕಾರ್ಮಿಕರು ಇದ್ದಾರೆ. ಎರಡು ಶಿಫ್ಟ್ ಪ್ರಕಾರ ಸುಮಾರು 12ಗಂಟೆಗಳ ಕಾಲ ದುಡಿಸಿಕೊಂಡರೂ, ಕಾನೂನು ಪ್ರಕಾರ ಸಂಬಳ ಕೊಡುತ್ತಿಲ್ಲ, ಬೋನಸ್ ಕೂಡ ಇಲ್ಲ. ಗಂಡಸರಿಗೆ 6 ರೂಪಾಯಿ, ಹೆಂಗಸರಿಗೆ 4 ರೂಪಾಯಿ ಕೊಡುತ್ತಿದ್ದಾರೆ. ಇರತಕ್ಕ ತೊಂದರೆಗಳ ಬಗ್ಗೆ ಜಾಯಿಂಟ್ ಲೇಬರ್ ಕಮೀಷನರ್‌ರವರಿಗೆ ಮನವಿ ಮಾಡಿದ್ದಾರೆ. ಮೆರವಣಿಗೆ ಮಾಡಿದ್ದಾರೆ. 1948ನೇ ಇಸವಿಯಲ್ಲಿ ಎಂಟು ಗಂಟೆಗಳ ಕಾಲ ಮಾತ್ರ ದುಡಿಯತಕ್ಕದ್ದೆಂದು ಕಾನೂನು ಮಾಡಿದರೂ, ಅದರಂತೆ ಯಾರೂ ಕೆಲಸ ಮಾಡಿಸುತ್ತಿಲ್ಲ. ಇವತ್ತು ಅಲ್ಲಿನ ಕಾರ್ಮಿಕರು ಸರಕಾರದ ಗಮನ ಸೆಳೆಯಲು ಧರಣಿ ಮಾಡುತ್ತೇವೆಂದು ಬಂದಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಕೈಗಾರಿಕಾ ಮಂತ್ರಿಯವರು ಹಾಗೂ ಕಾನೂನು ಮಂತ್ರಿಯವರು ಸೂಕ್ತ ಕ್ರಮ ಕೈಗೊಳ್ಳುವ ವಿಚಾರದಲ್ಲಿ ಭರವಸೆ ಕೊಡುತ್ತಾರೆಂದು ಆಶಿಸುತ್ತೇನೆ.

(ii) Drinking Water Supply at Madikeri

Sri M M Nanaiah,— Sir, the Drinking Water Supply system at Madikeri Town in Kodagu District is dis upted very seriously as the Pumping Motors said to have been damaged due to fluctuating and low voltage of Power Supply b sides the Power she dding. Therefore, restoring normal water supply is very urgent and essential by providing and alternative Diesel Engine to generate power at the water point near Galebeddu village. Hence, it is brought to the notice of the Government.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).— ಮಡಿಕೇರಿಯಲ್ಲಿ 50ಹೆಚ್‌ಪಿ ಬದಲು 120 ಹೆಚ್‌ಪಿ ಪಂಪುಸೆಟ್ಟನ್ನು ಹಾಕಬೇಕೆನ್ನುವ ಬಗ್ಗೆ ಕೆಲಸವಾಗುತ್ತಿದೆ. ಅಲ್ಲದೆ ಅಲ್ಲಲ್ಲಿ ಸ್ವಲ್ಪ ನೀರು ಸಂಗ್ರಹಣೆ ಮಾಡುವುದಕ್ಕೆ ಕಟ್ಟಡವನ್ನು ಕಟ್ಟುವ ಬಗ್ಗೆಯೂ ಕೂಡ ಕೆಲಸವಾಗುತ್ತಿದೆ. ಮತ್ತೆ ಉಳಿದ ವಿಷಯ ನನ್ನ ಗಮನಕ್ಕೆ ಬಂದಿಲ್ಲ.

(iii) ಚಕ್ರವಾರಾಹಿ ಯೋಜನೆಯಲ್ಲಿ ಭೂಮಿ ಕಳಕೊಂಡವರಿಗೆ ಕೊಡತಕ್ಕ ಪರಿಹಾರ ಮತ್ತು ಪುನರ್ವಸತಿ :—

ಶ್ರೀ ಸ್ವಾಮಿರಾವ್ ಬಿ. (ಹೊಸನಗರ) — ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯ ಚಕ್ರವಾರಾಹಿ ಪ್ರಾಜೆಕ್ಟ್‌ನಲ್ಲಿ ಮನೆ ಮಠಗಳನ್ನು ಕಳೆದುಕೊಂಡಿರತಕ್ಕವರು ಕಳೆದ ವರ್ಷ ಮತ್ತು ಮೊನ್ನೆ 30ನೇ ತಾರೀಖು ಕೂಡ ಚಳುವಳಿ ನಡೆಸಿದ್ದಾರೆ. ಹಿಂದಿನ ಸಾರಿ ಚಳುವಳಿ ನಡೆಸಿದಾಗ ಆ ಚಳುವಳಿಯಲ್ಲಿ ಭಾಗವಹಿಸಿ ನಾನು 4 ದಿನ ಜೈಲಿನಲ್ಲಿದ್ದು ಬಂದಿದ್ದೇನೆ. ಮುಳುಗಡೆ ಪ್ರದೇಶದಿಂದ ದೂರದಲ್ಲಿರತಕ್ಕವರು ಪರಿಹಾರವನ್ನು ತೆಗೆದುಕೊಂಡಿದ್ದಾರೆ. ಆದರೆ ಮುಳುಗಡೆ ಪ್ರದೇಶದಲ್ಲಿರತಕ್ಕ ಬಡಪರ ಮನೆಗಳು ಮತ್ತು ಜಾನುವಾರುಗಳು ಏನು ತೇಲಿ ಹೋಗಿವೆ ಅವರಿಗೆ ಇನ್ನೂ ಪರಿಹಾರ ಸಿಕ್ಕಿಲ್ಲ. ಆದುದರಿಂದ ಸರ್ಕಾರ ಇದರ ಬಗ್ಗೆ ಉದಾಸೀನ ಭಾವನೆ ತಾಳದೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಹಿಂದಿನ ಸರ್ಕಾರ ಇದ್ದಾಗ ಒಂದು ಹೈಪವರ್ ಕಮಿಟಿಯನ್ನು ಮಾಡಿದ್ದರು. ಆ ಕಮಿಟಿಯಲ್ಲಿರತಕ್ಕ ಅಧಿಕಾರಿ